# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001
ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047
ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in


ಸಂಖ್ಯೆ:ಎಸ್‌ಹೆಚ್‌ಕ್ಯೂ/ 971 /2026-27 ದಿನಾಂಕ:27.08.2026

ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಕರ್ನಾಟಕ

ಮಾನ್ಯರೆ,

ವಿಷಯ:- ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆ ಹಾಸನ ಮತ್ತು ಶ್ರೀ ಕ್ಷೇತ್ರ ಶ್ರವಣಬೆಳಗೊಳ ಇವರಿಂದ ಏರ್ಪಡಿಸಿರುವ **46ನೇ ರಾಜ್ಯ ಮಟ್ಟದ ಕಬ್ ಮತ್ತು ಬುಲ್‌ಬುಲ್ ಉತ್ಸವಕ್ಕೆ ಅರ್ಹ ವಿದ್ಯಾರ್ಥಿಗಳನ್ನು ಮತ್ತು ದಳನಾಯಕರುಗಳನ್ನು ನಿಯೋಜಿಸುವ ಬಗ್ಗೆ.**

*******

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಿಂದ ಮತ್ತು ಹಾಸನ ಜಿಲ್ಲಾ ಸಂಸ್ಥೆಯ ನೇತೃತ್ವ ಮತ್ತು ಶ್ರೀ ಕ್ಷೇತ್ರ, ಶ್ರವಣಬೆಳಗೊಳ ಇವರ ಸಹಕಾರದೊಂದಿಗೆ **46ನೇ ರಾಜ್ಯ ಮಟ್ಟದ ಕಬ್ ಮತ್ತು ಬುಲ್‌ಬುಲ್ ಉತ್ಸವವನ್ನು ದಿನಾಂಕ: 03 ರಿಂದ 06 ಅಕ್ಟೋಬರ್ 2026ರ ವರೆಗೆ ಶ್ರೀ ಕ್ಷೇತ್ರ, ಶ್ರವಣಬೆಳಗೊಳ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ** ಇಲ್ಲಿ ಆಯೋಜಿಸಲಾಗಿದ್ದು, ಸದರಿ ಉತ್ಸವಕ್ಕೆ ತಮ್ಮ ಜಿಲ್ಲೆಯ ಆಸಕ್ತ ಕಬ್ಸ್-ಬುಲ್‌ಬುಲ್ಸ್ ಮತ್ತು ದಳನಾಯಕರನ್ನು ಈ ಕೆಳಗಿನ ವಿವರಗಳನ್ನು ಮನಗಂಡು, ನಿಯೋಜಿಸಲು ಕೋರಿದೆ.

| | |
|---|---|
| ಶಿಬಿರ | 46ನೇ ರಾಜ್ಯ ಮಟ್ಟದ ಕಬ್ ಮತ್ತು ಬುಲ್‌ಬುಲ್ ಉತ್ಸವ- ಹಾಸನ |
| ಸ್ಥಳ | ಶ್ರೀ ಕ್ಷೇತ್ರ, ಶ್ರವಣಬೆಳಗೊಳ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ |
| ಉತ್ಸವದ ದಿನಾಂಕ | 03.10.2026 ರಿಂದ 06.10.2026 ರವರೆಗೆ |
| ಹಾಜರಾಗುವ ದಿನಾಂಕ | 03.10.2026 ರ ಬೆಳಗ್ಗೆ 08.00 ಗಂಟೆಯೊಳಗೆ. |
| ಬಿಡುಗಡೆ ಮಾಡುವ ದಿನಾಂಕ | 06.10.2026 ರ ಸಂಜೆ 5 ಗಂಟೆಯ ನಂತರ ಬಿಡುಗಡೆಗೊಳಿಸಲಾಗುವುದು. |
| ನೊಂದಣಿ ಶುಲ್ಕ | ಕಬ್ಸ್-ಬುಲ್‌ಬುಲ್ಸ್‌ಗಳಿಗೆ ತಲಾ ರೂ.500/-ಗಳು.<br>ದಳನಾಯಕರುಗಳು ನೊಂದಣಿ ಶುಲ್ಕವನ್ನು ಪಾವತಿಸುವಂತಿಲ್ಲ. |
| ಯಾರು ಭಾಗವಹಿಸಬಹುದು | ಕನಿಷ್ಠ ತೃತೀಯ ಚರಣ-ಸುವರ್ಣಪಂಖ್ ಪೂರ್ಣಗೊಳಿಸಿದ ಕಬ್-ಬುಲ್‌ಬುಲ್‌ಗಳು ಉತ್ಸವಕ್ಕೆ ಭಾಗವಹಿಸಲು ಅರ್ಹರಾಗಿರುತ್ತಾರೆ. |
| ಪ್ರತಿ ಜಿಲ್ಲೆಗೆ ನೀಡಿರುವ ಕೋಟಾ | 8 ಕಬ್ಸ್, 1 ಕಬ್ ಮಾಸ್ಟರ್<br>8 ಬುಲ್‌ಬುಲ್ಸ್, 1 ಫ್ಲಾಕ್ ಲೀಡರ್ |
| ಚಟುವಟಿಕೆಗಳು | ಸಾಹಸಮಯ ಚಟುವಟಿಕೆಗಳು, ಕರಕುಶಲ ವಸ್ತುಗಳ ತಯಾರಿಕೆ ಗಾಳಿಪಟ ತಯಾರಿಕೆ ಮತ್ತು ಹಾರಾಟ, ಚಿತ್ರಕಲೆ ಮತ್ತು ಪೇಂಟಿಂಗ್, ಮರಿಗಳಿಗೆ ಕಾಡಿನ ಕಥೆಗಳು ಮತ್ತು ಬುಲ್‌ಬುಲ್‌ಗಳಿಗೆ ತಾರಾ ಕಥೆ, ವಸ್ತುಪ್ರದರ್ಶನ, ಆಹಾರ ಮೇಳ, ಫೋಕ್ ಫೆಸ್ಟ್, ರೆಡ್ ಫ್ಲವರ್ ಮತ್ತು ಕಲರವ (ಶಿಬಿರಾಗ್ನಿ). ಪಥ ಚಲನ, ಮೋಜಿನ ಆಟಗಳು, ಪೌರಾಣಿಕ ಕಥಾಭಿನಯ. ಜೊತೆಗೆ ಸದರಿ ಚಟುವಟಿಕೆಗಳಿಗೆ ಬೇಕಾಗುವ ಕಚ್ಚಾ ವಸ್ತುಗಳನ್ನು ಭಾಗವಹಿಸುವವರು ತಪ್ಪದೇ ಹೊಂದಿರುವುದು. |
| ಶಿಬಿರದ ವಿಶೇಷತೆ | ಕಬ್-ಬುಲ್‌ಬುಲ್ ಉತ್ಸವದ ವಿಶೇಷ ಚಟುವಟಿಕೆಗಳೊಂದಿಗೆ ಸ್ಥಳೀಯ ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆಯ ವ್ಯವಸ್ಥೆಯನ್ನು ಮಾಡಲಾಗಿದೆ. |
| ಶಿಬಿರ ಸ್ಥಳ ತಲುಪುವ ವಿಧಾನ | ಶ್ರೀ ಕ್ಷೇತ್ರ, ಶ್ರವಣಬೆಳಗೊಳವು ಚನ್ನರಾಯಪಟ್ಟಣದಿಂದ 15 ಕಿ.ಮೀ. ದೂರದಲ್ಲಿದೆ. ಬೆಂಗಳೂರು-ಮಂಗಳೂರು ರೈಲಿನಲ್ಲಿ ಬರುವವರು ಶ್ರವಣಬೆಳಗೊಳ ರೈಲು ನಿಲ್ದಾಣದಲ್ಲಿ ಇಳಿದು, ಶ್ರವಣಬೆಳಗೊಳ ರೈಲು ನಿಲ್ದಾಣದಿಂದ ಶಿಬಿರ ಸ್ಥಳಕ್ಕೆ 1 ಕಿ.ಮೀ ಅಂತರವಿದ್ದು, ಆಟೋ ಮೂಲಕ ತಲುಪಬಹುದು. ಇತರೆ ರೈಲಿನಲ್ಲಿ ಬರುವವರು ಅರಸಿಕೆರೆ ಅಥವಾ ಹಾಸನ |

| | |
|---|---|
| | ರೈಲ್ವೆ ನಿಲ್ದಾಣದಲ್ಲಿ ಇಳಿದು ಬಸ್ ಮೂಲಕ ಚನ್ನರಾಯಪಟ್ಟಣವನ್ನು ತಲುಪುವುದು. ನಂತರ ಚನ್ನರಾಯಪಟ್ಟಣದಿಂದ ಶ್ರವಣಬೆಳಗೊಳಕ್ಕೆ ಬಸ್ ಮೂಲಕ ತಲುಪುವುದು. |
| ಏನನ್ನು ತರುವುದು | 2 ಜೊತೆ ಪೂರ್ಣ ಸಮವಸ್ತ್ರಗಳು, ಬೆಚ್ಚಗಿನ ಲಘು ಹಾಸಿಗೆ, ತಟ್ಟೆ ಮತ್ತು ಲೋಟ, ಹಗ್ಗ, ಲೇಖನಿ ಮತ್ತು ಪೆನ್ಸಿಲ್, ಟಾರ್ಚ್, ನೀರಿನ ಬಾಟಲ್, ಬಕೆಟ್, ಮಗ್, ಸಾಂಸ್ಕೃತಿಕ & ಶಿಬಿರಾಗ್ನಿ ವಸ್ತುಗಳು, ಕಲರ್ ಪೇಪರ್ಸ್, ಸ್ಕೆಚ್‌ಪೆನ್, ಆಹಾರ ಮೇಳಕ್ಕೆ ಸಂಬಂಧಪಟ್ಟ ವಸ್ತುಗಳು, ವಸ್ತು ಪ್ರದರ್ಶನ ಪ್ಲೇ ಆಕ್ಟಿಂಗ್, ತಾರಾ ಕಥೆ, ಮುಖವಾಡ, ರೆಕ್ಕೆಗಳು, ಜಾನಪದ ನೃತ್ಯಕ್ಕೆ ಬೇಕಾದ ಉಡುಪುಗಳು, ಇತ್ಯಾದಿಗಳನ್ನು ತೆಗೆದುಕೊಂಡು ಬರುವುದು ಹಾಗೂ ಉತ್ಸವಕ್ಕೆ ಅವಶ್ಯಕವಿರುವ ಎಲ್ಲಾ ಚಟುವಟಿಕೆಗಳಿಗೆ ಸಂಪೂರ್ಣವಾಗಿ ಸಿದ್ಧರಾಗಿ ಭಾಗವಹಿಸುವುದು. |
| ಪ್ರಯಾಣ ವೆಚ್ಚ ಮತ್ತು ನೊಂದಾವಣಿ ಶುಲ್ಕ | ಆಯಾಯ ಶಾಲೆಗಳ ಸ್ಕೌಟ್-ಗೈಡ್ ನಿಧಿಯಿಂದ ಭರಿಸಿಕೊಳ್ಳುವುದು. |
| ಭಾಗವಹಿಸುವವರು ಕಡ್ಡಾಯವಾಗಿ ಈ ಲಿಂಕ್‌ನಲ್ಲಿ ನೊಂದಾಯಿಸುವುದು. | https://zfrmz.in/AjR6VwQsUq8rth4EPGlr<br>**20.09.2026**ರ ಒಳಗಾಗಿ ನೊಂದಾಯಿಸುವುದು. |
| ಸಂಪರ್ಕಿಸಬೇಕಾದವರ ವಿವರ | ಶ್ರೀ ಸುರೇಶ್ ಗುರೂಜಿ, ಜಿಲ್ಲಾ ಕಾರ್ಯದರ್ಶಿ, ಹಾಸನ<br>ಮೊಬೈಲ್ ನಂ.: 9448156105<br>ಶ್ರೀಮತಿ ಪ್ರಿಯಾಂಕ ಹೆಚ್.ಎಂ, ಎಎಸ್‌ಒಸಿ (ಗೈ), ಹಾಸನ<br>ಮೊಬೈಲ್ ನಂ. : 8095619793<br>ಶ್ರೀಮತಿ ಕುಮಾರಿ ಹೊನ್ನಮ್ಮ, ಎ.ಎಸ್.ಒ.ಸಿ(ಗೈ) & ಪರೀಕ್ಷಾ ವಿಭಾಗದ ಇನ್‌ಚಾರ್ಜ್ ಮೊಬೈಲ್ ನಂ. : 8971825570 |

ಭಾಗವಹಿಸುವ ಕಬ್ಸ್-ಬುಲ್‌ಬುಲ್ಸ್‌ಗಳು ಶಿಬಿರ ಶುಲ್ಕ ಮತ್ತು ಪ್ರಯಾಣ ಭತ್ಯೆಯನ್ನು ಆಯಾ ಶಾಲಾ ಸ್ಕೌಟ್-ಗೈಡ್ ನಿಧಿಯಿಂದ ಭರಿಸುವುದು. ಆಯಾಯ ಜಿಲ್ಲೆಗಳವರು ತಮ್ಮ ಜಿಲ್ಲೆಗೆ ನೀಡಿರುವ ಕೋಟದನ್ವಯ ಅರ್ಹ ಕಬ್ಸ್-ಬುಲ್‌ಬುಲ್ಸ್‌ಗಳನ್ನು ಆಯ್ಕೆ ಮಾಡಿ, ಉತ್ತಮ ಪೂರ್ವಸಿದ್ಧತೆಯೊಂದಿಗೆ ನಿಯೋಜಿಸುವುದು. ಹೀಗೆ ಆಯ್ಕೆಯಾದ ಮಕ್ಕಳನ್ನು ಸುರಕ್ಷಿತವಾಗಿ ಕರೆತಂದು, ಸುರಕ್ಷಿತವಾಗಿ ಅವರುಗಳು ಮನೆಗೆ ತಲುಪುವವರೆಗೂ ಜವಾಬ್ದಾರಿಯಿಂದ ನೋಡಿಕೊಳ್ಳುವಂತೆ ಸಂಬಂಧಪಟ್ಟ ದಳನಾಯಕರುಗಳಿಗೆ ತಿಳಿಸುವುದು. ಹೀಗೆ ಭಾಗವಹಿಸುವ ಕಬ್ಸ್ ಮತ್ತು ಬುಲ್‌ಬುಲ್ಸ್‌ಗಳ ಹೆಸರು ಮತ್ತು ಇತರೆ ವಿವರಗಳನ್ನು ಮೇಲೆ ನೀಡಿರುವ ಲಿಂಕ್‌ನಲ್ಲಿ ದಿನಾಂಕ:20.09.2026ರ ಒಳಗಾಗಿ ನೊಂದಾಯಿಸಿ, ರಾಜ್ಯ ಸಂಸ್ಥೆಗೆ ಕಳುಹಿಸುವುದು. ಸದರಿ ಉತ್ಸವದಲ್ಲಿ ಭಾಗವಹಿಸಲು ನಿಗಧಿತ ದಿನಾಂಕದ ಒಳಗೆ ಬಂದ ಹೆಸರುಗಳನ್ನು ಮಾತ್ರ ಪರಿಗಣಿಸಲಾಗುವುದು ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಈ ಬಗ್ಗೆ ಆದ್ಯ ಕ್ರಮ ಕೈಗೊಂಡು, ಕೈಗೊಂಡ ಕ್ರಮಗಳ ಬಗ್ಗೆ ಕೂಡಲೇ ವರದಿ ಮಾಡಲು ಕೋರಿದೆ.

ಸ್ಕೌಟ್-ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ರಾಜ್ಯ ಮುಖ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

**ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:**

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ.ಗೈ, ಜಿಲ್ಲಾ ಸಂಸ್ಥೆ, ಹಾಸನ ಜಿಲ್ಲೆ- **ಸೂಕ್ತ ಮಾಹಿತಿ ಹಾಗೂ ಮುಂದಿನ ಕ್ರಮಗಳಿಗಾಗಿ ಸಲ್ಲಿಸಿದೆ.**
2. ಎಲ್ಲಾ ಜಿಲ್ಲಾ ಮುಖ್ಯ ಆಯುಕ್ತರುಗಳು, ಭಾ.ಸ್ಕೌ.ಗೈ, ಜಿಲ್ಲಾ ಸಂಸ್ಥೆ, ಕರ್ನಾಟಕ
3. ಎ.ಎಸ್.ಒ.ಸಿ/ಡಿಒ/ಡಿಒಟಿ/ಎಸ್‌ಜಿವಿ/ಎಸ್‌ಜಿವಿಗಳ ಸೂಕ್ತ ಕ್ರಮಕ್ಕಾಗಿ
4. ಕಛೇರಿ ಪ್ರತಿ